ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

# Karnataka State Road Transport Corporation

## Recruitment Section (ನೇಮಕ ಶಾಖೆ)

ಸಂಖ್ಯೆ:ಕರಾಸಾ/ಕೇಕ/ನೇಮಕ/ಸಿ-2/ ೧೦೩೭/19-20 ದಿನಾಂಕ: ೨೨-01-2020

**<u>ಪತ್ರಿಕಾ ಪ್ರಕಟಣೆ</u>**

ವಿಷಯ : ಕರಾರಸಾ ನಿಗಮದಲ್ಲಿ ಕರೆಯಲಾದ ತಾಂತ್ರಿಕ ಸಹಾಯಕ ಮತ್ತು ಭದ್ರತಾ ರಕ್ಷಕ ಹುದ್ದೆಗಳಿಗೆ ಕರೆ ಪತ್ರಗಳನ್ನು ಡೌನ್-ಲೋಡ್ ಮಾಡಿಕೊಳ್ಳುವ ಕುರಿತು.

*****

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಜಾಹೀರಾತು ಸಂ.1/2018 ದಿನಾಂಕ:17-3-2018 ಮತ್ತು ಜಾಹೀರಾತು ಸಂ.2/2018 ದಿನಾಂಕ:12-6-2018 ರನ್ವಯ ಕರೆಯಲಾದ ತಾಂತ್ರಿಕ ಸಹಾಯಕ ಮತ್ತು ಭದ್ರತಾ ರಕ್ಷಕ ಹುದ್ದೆಗಳಿಗೆ ದಿನಾಂಕ: 02-02-2020 ರಂದು ನಡೆಯುತ್ತಿರುವ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಇ-ಪ್ರವೇಶ ಪತ್ರವನ್ನು ದಿನಾಂಕ:21-01-2020 ರಿಂದ ಮುದ್ರಿಸಿಕೊಳ್ಳಲು ಅವಕಾಶ ಮಾಡಲಾಗಿದೆ. ಉಳಿದಂತೆ, ಅರ್ಜಿ ಕಳೆದುಕೊಂಡಿರುವ ಅಭ್ಯರ್ಥಿಗಳಿಗೆ ನೊಂದಣಿ ಸಂಖ್ಯೆಯ ಗುರುತಿನ ಸಲುವಾಗಿ ಅಭ್ಯರ್ಥಿಗಳ ಅರ್ಜಿ ಸಂಖ್ಯೆ, ಹೆಸರು, ತಂದೆಯ ಹೆಸರುಳ್ಳ ವಿವರಗಳನ್ನು ಅಭ್ಯರ್ಥಿಗಳ ಗಮನಕ್ಕಾಗಿ ನಿಗಮದ ವೆಬ್-ಸೈಟ್ http://ksrtc.in ನಲ್ಲಿ ಬಿತ್ತರಿಸಲಾಗಿದೆ. ಅಭ್ಯರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಲಾಗಿದೆ.

ಆಯ್ಕೆಯು ಸಂಪೂರ್ಣ ಮೆರಿಟ್ ಆಧಾರದ ಮೇಲೆ ಮಾಡಲಾಗುವುದು. ಆಯ್ಕೆ ವಿಧಾನ ಈ ಕೆಳಗಿನಂತಿರುತ್ತದೆ.

- ತಾಂತ್ರಿಕ ಸಹಾಯಕ ಹುದ್ದೆಗೆ CAT ಪರೀಕ್ಷೆಯಲ್ಲಿ ಗಳಿಸಿದ ಶೇ.75 ಅಂಕ ಮತ್ತು ವಿದ್ಯಾರ್ಹತೆಯಲ್ಲಿ ಗಳಿಸಿದ ಶೇ.25 ಅಂಕಗಳನ್ನು ಒಗ್ಗೂಡಿಸಿ ಮೆರಿಟ್/ಮೀಸಲಾತಿ ಅನುಸಾರ ಆಯ್ಕೆ ಮಾಡಲಾಗುವುದು.
- ಭದ್ರತಾ ರಕ್ಷಕ ಹುದ್ದೆಗೆ CAT ಪರೀಕ್ಷೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆ ಅರ್ಹಗೊಂಡ ನಂತರ CAT ಪರೀಕ್ಷೆಯಲ್ಲಿ ಗಳಿಸಿದ ಶೇ.75 ಅಂಕ ಮತ್ತು ವಿದ್ಯಾರ್ಹತೆಯಲ್ಲಿ ಗಳಿಸಿದ ಶೇ.25 ಅಂಕಗಳನ್ನು ಒಗ್ಗೂಡಿಸಿ ಮೆರಿಟ್/ಮೀಸಲಾತಿ ಅನುಸಾರ ಆಯ್ಕೆ ಮಾಡಲಾಗುವುದು.

ಆಯ್ಕೆಗೆ ಯಾವುದೇ ರೀತಿಯ ಸಂದರ್ಶನ ಹಾಗೂ ಸಂದರ್ಶನದ ಅಂಕಗಳು ಇರುವುದಿಲ್ಲ. **<u>ಅಭ್ಯರ್ಥಿಗಳು ಯಾವುದೇ ಶಿಫಾರಸ್ಸು, ಪ್ರಭಾವ ಹಾಗೂ ಆಮಿಷ ಅವ್ಯವಹಾರಗಳಿಗೆ ಒಳಗಾಗಬಾರದೆಂದು ಸಂಸ್ಥೆಯು ಈ ಮೂಲಕ ಸ್ಪಷ್ಟಪಡಿಸಿದೆ</u>**. ಇನ್ನು ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್-ಸೈಟ್ ಆದ http://ksrtc.in ಅನ್ನು ವೀಕ್ಷಿಸುವುದು.

ನಿರ್ದೇಶಕರು (ಸಿಬ್ಬಂದಿ ಮತ್ತು ಪರಿಸರ)